

# ‘ಸೌಂಡಿಂಗ್ ಬೌಲ್’ನಲ್ಲಿ ಸಪ್ತಸ್ವರ!

■ ಯು.ವೇಣೂರು

ಸಂಗೀತ ವಾದ್ಯಗಳಲ್ಲಿ ತಂತಿ ವಾದ್ಯವೇ ಆಗಿರಲಿ, ಸುಷಿರ ವಾದ್ಯವೇ ಇರಲಿ, ನುಡಿಸಾಣಿಕೆ ಕ್ರಮ ಬೇರೆ ಬೇರೆಯಾದರೂ ಎಲ್ಲ ವಾದ್ಯಗಳೂ ಕೊಡುವ ನಾದ ಮಾತ್ರ ಮಧುರಾತಿಮಧುರ. ಸಪ್ತಸ್ವರಗಳನ್ನು ಹೊಮ್ಮಿಸುವ ಈ ವಾದ್ಯಗಳ ನಾದವೈಭವ ವರ್ಣನಾತೀತ.

ತಂತಿ ವಾದ್ಯಗಳನ್ನು ಮೀಟಿ ಮಾಧುರ್ಯಭರಿತ ಸಂಗೀತ ಹೊಮ್ಮಿದಾಗ ಅದು ಹೃದಯ ತಟ್ಟುತ್ತದೆ, ಮನಸ್ಸು ಮುದಗೊಳ್ಳುತ್ತದೆ. ಚಿತ್ರದಲ್ಲಿ ಕಾಣುವ ಈ ವಾದ್ಯವನ್ನು ಗಮನಿಸಿ. ವೃತ್ತಾಕಾರವಾಗಿರುವ ಬೌಲ್ ಅನ್ನೇ ಹೋಲುವ ಈ ವಾದ್ಯಕ್ಕೆ ತಂತಿಯನ್ನು ಬಿಗಿದು ಶ್ರುತಿ ಮಾಡಿ ಮೀಟುವ ಮೂಲಕ ಸುಶ್ರಾವ್ಯ ಸಂಗೀತ ಹೊಮ್ಮಿಸಲಾಗುತ್ತದೆ. ಮರದಿಂದ ಮಾಡಿದ ಈ ವಾದ್ಯವನ್ನು ತಯಾರಿಸಿದವರು ಇಂಗ್ಲೆಂಡಿನ ತೋಬಿಯಸ್ ಕಯೆ ಎಂಬ ಕಲಾವಿದ. ಸೃಜನಶೀಲತೆ, ಕಲಾತ್ಮಕತೆ ಮೇಲಾಗಿ ಸಂಗೀತದಲ್ಲಿ ಅಪರಿಮಿತ ಆಸಕ್ತಿ ಇರುವ ಕಯೆ, ಸೌಂಡಿಂಗ್ ಬೌಲ್ಸ್‌ನ ತಯಾರಿಕೆಗಾಗಿ ಒಂದು ಕಂಪೆನಿಯನ್ನೇ ಆರಂಭಿಸಿದ್ದಾರೆ. ಇವರ ತಂಡದಲ್ಲಿ ನುರಿತ ಕುಶಲಕರ್ಮಿ ವಾದ್ಯ ತಯಾರಕರಾದ ಜರ್ಮನಿಯ ರೇಮಂಡ್ ಫ್ಲೇರಿಡ್, ಡಾರ್ಸೆಟ್‌ನ ಜಾಯ್‌ಹಾರ್ನ್‌ಬಿ ಮುಂತಾದವರು ಇದ್ದು ‘ಸೌಂಡಿಂಗ್ ಬೌಲ್ಸ್ ಮೂಲಕ ವಿಶ್ವದಾದ್ಯಂತ ಸೌಂಡ್ ಮಾಡುತ್ತಿದ್ದಾರೆ.

## ವಾದ್ಯ ತಯಾರಿಕೆ ಹೇಗೆ?

ಮರದ ದೊಡ್ಡದಾದ ಬೌಲ್‌ನ ಒಳಭಾಗದಲ್ಲಿ ತಂತಿಗಳನ್ನು ಬಿಗಿದು ಕಟ್ಟಲಾಗಿದೆ. ಸ್ವರಗಳನ್ನು ಶ್ರುತಿ ಮಾಡಲು ಅನುಕೂಲವಾಗುವಂತೆ





ತಂತಿಗಳನ್ನು ಬಿಗಿದು ಕಟ್ಟಿದ ಬೌಲ್‌ನ ಅಂಚಿಗೆ ಕೀಗಳನ್ನು ಅಳವಡಿಸಿದ್ದು, ಹೇಗೆ ಬೇಕಾದರೂ ಶ್ರುತಿ ಮಾಡಬಹುದು. ಯಾವ ಸ್ಥಾಯಿಗಳಲ್ಲಿ ಬೇಕಾದರೂ ತಂತಿಗಳನ್ನು ಮೀಟುತ್ತಾ ಲೀಲಾಜಾಲವಾಗಿ ನುಡಿಸಬಹುದು. ಸೌಂಡಿಂಗ್ ಬೌಲ್ ತಯಾರಿಸಲು ‘ಇಂಗ್ಲಿಷ್ ಹಾರ್ಡ್‌ವುಡ್’ ಎಂಬ ಮರವನ್ನು ಬಳಸಲಾಗಿದೆ. ಇದಕ್ಕಾಗಿ ಜೀವಂತವಿರುವ ಯಾವುದೇ ಮರವನ್ನು ಕಡಿದು ಹಾಕುವುದಿಲ್ಲ. ಬದಲಾಗಿ ಗಾಳಿ ಮಳೆಯಿಂದಾಗಿ ಉರುಳಿ ಬಿದ್ದ ಮರಗಳನ್ನು ಬಳಸಲಾಗಿದೆ. ವಾದ್ಯದ ಹೊರಮೈಗೆ ಕುಸುರಿ ಕೆತ್ತನೆ ಮಾಡಲಾಗಿದ್ದು, ನೋಡಲು ಕೂಡ ಆಕರ್ಷಕವಾಗಿದೆ.

ಕಲಾವಿದ ಹಾಗೂ ವಾದ್ಯ ತಯಾರಕ ತೋಬಿಯಸ್ ಕಯೆ ಸಂಗೀತ ವಾದ್ಯ ತಯಾರಕ ಕಂಪೆನಿಯ ನಿರ್ದೇಶಕರಾಗಿದ್ದಲ್ಲದೆ ಆಗಾಗ ಸಂಗೀತ ಕಛೇರಿಗಳನ್ನೂ ಏರ್ಪಡಿಸುತ್ತಾರೆ. ತಮ್ಮದೇ ಪರಿಕಲ್ಪನೆಯಲ್ಲಿ ಈ ವಾದ್ಯ ರೂಪುಗೊಂಡಿದ್ದರೂ ಇದರ ಹಿಂದಿನ ಪರಿಶ್ರಮ ಮಾತ್ರ ಇಂದು ನಿನ್ನೆಯದಲ್ಲ. ಕಳೆದ 15 ವರ್ಷಗಳ ಹಿಂದಿನಿಂದಲೇ ಇದಕ್ಕೆ ತಯಾರಿ ನಡೆಯುತ್ತಲೇ ಇತ್ತು. ಅದು ಇದೀಗ ಪರಿಪೂರ್ಣವಾಗಿ ಸಾಕಾರಗೊಂಡಿದೆ. ಐರ್ಲೆಂಡ್‌ನ ಕೃಷಿ ಕುಟುಂಬದಲ್ಲಿ ಜನಿಸಿದ ತೋಬಿಯಸ್ ಕಯೆ, ತೋಟಗಾರಿಕೆ, ಕಂಪ್ಯೂಟರ್, ಕಟ್ಟಡ ನಿರ್ಮಾಣ ಕಲೆ ಮುಂತಾದ ವಿಭಿನ್ನ ವಿಷಯಗಳಲ್ಲಿ ಆಸಕ್ತಿ ಹೊಂದಿದ್ದರೂ ವಾದ್ಯ ತಯಾರಿಕೆಯಲ್ಲೇ ತೊಡಗಿಸಿಕೊಂಡಿದ್ದಾರೆ. ಧ್ಯಾನ ಹಾಗೂ ಪ್ರಾಣಾಯಾಮಗಳನ್ನೂ ಹೇಳಿಕೊಡುವ ತೋಬಿಯಸ್, ಸದ್ಯ ಪಿಯಾನೊ ಕಲಿಕೆಯಲ್ಲೂ ನಿರತರಾಗಿದ್ದಾರೆ. ■